# ವೆಂಕಟರಮಣೇ ಗೌಡ (ಸ್ಟಾರ್ ಚಂದ್ರು)
ವ್ಯಕ್ತಿ ಚಿತ್ರಣ

ವೆಂಕಟರಮಣೇ ಗೌಡ (ಸ್ಟಾರ್ ಚಂದ್ರು)

ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ವೆಂಕಟರಮಣೆಗೌಡರ ಯಶೋಗಾಥೆ ನಿಜಕ್ಕೂ ಅಚ್ಚರಿ ಹುಟ್ಟಿಸುವಂಥದ್ದು. ಸಾಮಾನ್ಯ ರೈತ ಕುಟುಂಬವೊಂದರಲ್ಲಿ ಹುಟ್ಟಿದ ಗೌಡರು, ಇವತ್ತು 'ಸ್ಟಾರ್ ಇನ್ಫ್ರಾಟೆಕ್' ಎಂಬ ದೊಡ್ಡ ಸಂಸ್ಥೆಯನ್ನು ಕಟ್ಟಿ ಬೆಳೆಸಿರುವುದು ಸಾಮಾನ್ಯ ಸಂಗತಿಯಲ್ಲ. ಸುಮಾರು ನಾಲ್ಕು ಸಾವಿರ ಕುಟುಂಬಗಳು ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾ ಬದುಕು ಕಟ್ಟಿಕೊಂಡಿದ್ದಾರೆ ಎಂದರೆ ಅವರ ಸಾಧನೆಯ ಅಗಾಧತೆ ಮನದಟ್ಟಾಗುತ್ತದೆ. ಇವತ್ತು ಜನ ವೆಂಕಟರಮಣೇ ಗೌಡರನ್ನು ಪ್ರೀತಿಯಿಂದ 'ಸ್ಟಾರ್ ಚಂದ್ರು' ಎಂದು ಕರೆಯುವುದು ಆ ಕಾರಣಕ್ಕಾಗಿಯೇ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ಕನ್ನಾಘಟ್ಟ ಎಂಬ ಸಣ್ಣ ಹಳ್ಳಿ ವೆಂಕಟರಮಣೇ ಗೌಡರ ಹುಟ್ಟೂರು. ತಂದೆ ಹೊನ್ನೇಗೌಡ ಮತ್ತು ತಾಯಿ ಶ್ರೀಮತಿ ಗಂಗಮ್ಮ. ಇಬ್ಬರು ಸೋದರರು ಮತ್ತು ನಾಲ್ವರು ಸೋದರಿಯರ ಜೊತೆ ತುಂಬಿದ ಮನೆಯಲ್ಲಿ ಬೆಳೆದ ಗೌಡರು ಬಾಲ್ಯದಲ್ಲಿ ಎಲ್ಲ ಕಷ್ಟಸುಖಗಳನ್ನು ಕಂಡವರು. ಬೆಳ್ಳೂರು ಹೋಬಳಿಯ ಅಗಚಹಳ್ಳಿ ಮತ್ತು ಬೆಳ್ಳೂರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಮುಗಿಸಿ, ಆದಿಚುಂಚನಗಿರಿಯಲ್ಲಿ ಪಿಯುಸಿ ಶಿಕ್ಷಣ ಪಡೆದು ಹೆಚ್ಚಿನ ವಿದ್ಯಾಭ್ಯಾಸದ ಬಸ್ಸು ಹಿಡಿದು ಬೆಂಗಳೂರಿಗೆ ಬಂದ ಗೌಡರು, ಬಿ.ಎಸ್‌ಸಿ ಪದವೀಧರ.

ಸ್ಟಾರ್ ಆದ ಗೌಡರು

ಪದವಿ ಶಿಕ್ಷಣ ಮುಗಿಸಿದ ನಂತರ ವೆಂಕಟರಮಣೇ ಗೌಡರನ್ನು ಸರ್ಕಾರಿ ಉದ್ಯೋಗ ಕೈಬೀಸಿ ಕರೆಯಿತು. ಆದರೂ ಅವರು ಅತ್ತ ನೋಡದೆ, ಅಣ್ಣ ಪುಟ್ಟಸ್ವಾಮಿಗೌಡರ ಉದ್ದಿಮೆಯಲ್ಲಿ ಕೈಜೋಡಿಸಿದರು. ಕೆಲ ಸಮಯದ ನಂತರ 'ಸ್ಟಾರ್ ಇನ್ಫ್ರಾಟೆಕ್' ಎಂಬ ಹೆಸರಿನ ತಮ್ಮದೇ ನಿರ್ಮಾಣ ಸಂಸ್ಥೆಯನ್ನು ಹುಟ್ಟು ಹಾಕಿದರು. 'ಸ್ಟಾರ್ ಇನ್ಫ್ರಾಟೆಕ್' ಭಾರೀ ಯಶಸ್ಸು ಕಂಡ ನಂತರ ಅವರ ಹೆಸರಿಗೂ 'ಸ್ಟಾರ್' ಅಂಟಿಕೊಂಡಿತು. ವೆಂಕಟರಮಣೇ ಗೌಡರು 'ಸ್ಟಾರ್ ಚಂದ್ರು' ಎಂಬ ಹೆಸರಿನಿಂದ ಮನೆಮಾತಾದರು. ನಿಜವಾದ ಅರ್ಥದಲ್ಲಿ ಸ್ಟಾರೇ ಆದರು.

ಕರ್ನಾಟಕ ಸರ್ಕಾರದ ಅನೇಕ ಕಾಮಗಾರಿಗಳನ್ನು, ಮೂಲಭೂತ ಸೌಲಭ್ಯಗಳನ್ನು ಸಾಕಾರಗೊಳಿಸಿರುವ 'ಸ್ಟಾರ್ ಇನ್ಫ್ರಾ ಟೆಕ್' ರಾಜ್ಯದ ಅಭಿವೃದ್ಧಿಗೆ ತನ್ನದೇ ಕೊಡುಗೆ ನೀಡಿದೆ. ಗುಣಮಟ್ಟದ ಕಾಮಗಾರಿ, ಸಮರ್ಥ ಆರ್ಥಿಕ ನಿರ್ವಹಣೆ, ಗಡುವಿನೊಳಗೆ ಯೋಜನೆಗಳ ಅನುಷ್ಠಾನಕ್ಕೆ ಹೆಸರಾಗಿರುವ ಸಂಸ್ಥೆಯ ಯಶಸ್ಸಿಗೆ ಚಂದ್ರು ಅವರ ಮುನ್ನೋಟ ಮತ್ತು ಕ್ರಿಯಾಶೀಲ ನಾಯಕತ್ವವೇ ಆಧಾರ.

ಕಷ್ಟಕ್ಕೆ ಮಿಡಿಯುವ ಮನಸು

ಉದ್ಯಮರಂಗದಲ್ಲಿ ಯಶಸ್ಸು ಪಡೆದರೂ 'ಸ್ಟಾರ್ ಚಂದ್ರು' ತಮ್ಮ ಹಳ್ಳಿ ಮತ್ತು ಜಿಲ್ಲೆಯ ಕಳ್ಳುಬಳ್ಳಿ ಸಂಬಂಧವನ್ನು ಉಳಿಸಿಕೊಂಡು ಬಂದಿದ್ದಾರೆ. ಹುಟ್ಟೂರಿನಲ್ಲಿ  ಗ್ರಂಥಾಲಯ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನೆರವು ನೀಡಿದ್ದಾರೆ; ದೇವಸ್ಥಾನ ಕಟ್ಟಿಸಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಿ ಅವರ ಕನಸು ಅರಳಲು ನೆರವಾಗಿದ್ದಾರೆ. ಮಾನಸಿಕ ಅಸ್ವಸ್ಥ ಮಕ್ಕಳ ಕೇಂದ್ರಕ್ಕೆ ಆಸರೆಯಾಗಿ ನಿಂತಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಮಾನವೀಯ ಚಟುವಟಿಕೆಗಳಿಗೆ ಚಂದ್ರು ಅವರ ಅಭಯಹಸ್ತವಿದೆ. ಇಷ್ಟೆಲ್ಲಾ ಮಾಡಿದರೂ 'ಸ್ಟಾರ್ ಚಂದ್ರು' ಪ್ರಚಾರದಿಂದ ದೂರವೇ ಉಳಿದಿದ್ದಾರೆ ಅನ್ನುವುದು ಗಮನಿಸಬೇಕಾದ ವಿಷಯ.

ಕೊರೋನಾ ಸಮಯದಲ್ಲೂ ಸ್ಟಾರ್ ಚಂದ್ರು ಸೇವಾ ಕೆಲಸಗಳನ್ನು ಮುಂದುವರೆಸಿದರು. ತಮ್ಮಯಶಸ್ಸಿಗೆ ಕಾರಣರಾಗಿದ್ದ ಕಾರ್ಮಿಕರನ್ನು ಅವರು ಕೈಬಿಡಲಿಲ್ಲ. ಮತ್ತೆ ಕೆಲಸ ಆರಂಭವಾಗುವವರೆಗೆ ವೇತನ ನೀಡುವ ಮೂಲಕ ಕಾರ್ಮಿಕರ ಕುಟುಂಬಗಳಿಗೆ ಆಸರೆಯಾದರು. ಬೃಹತ್ ಮಟ್ಟದಲ್ಲಿ ಉಪಹಾರಗೃಹವೊಂದನ್ನು ನಿರ್ವಹಿಸಿ, ಹಸಿವು ನೀಗಿಸುವ ದಾಸೋಹವನ್ನೂ ಮಾಡಿದರು.

ರೈತರ ಮಕ್ಕಳು ಉದ್ಯಮಿಗಳಾಗಿ ಬೆಳೆಯಬೇಕೆಂಬುದು ಚಂದ್ರು ಅವರ ದೊಡ್ಡ ಕನಸು. ಕೇವಲ ಉದ್ಯೋಗಿಗಳಾಗದೆ, ಉದ್ಯಮಿಗಳಾದರೆ ಇನ್ನೂ ಹಲವರಿಗೆ ಉದ್ಯೋಗದಾತರಾಗಬಹುದೆಂಬುದು ಅವರ ಸಿದ್ಧಾಂತ. ಆ ಉದ್ದೇಶದಿಂದ ಅವರು ಯುವಕರನ್ನು ತರಬೇತಿಗೊಳಿಸಲು ಅನೇಕ ಕಾರ್ಯಾಗಾರ, ವಿಚಾರ ಸಂಕಿರಣ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸಿದ್ದಾರೆ.

ರಾಜಕಾರಣದ ಕನಸು

ವೆಂಕಟರಮಣೇ ಗೌಡರು ಉದ್ಯಮಿಯಾಗಿ ಬೆಳೆಯುತ್ತಿದ್ದ ಕಾಲದಲ್ಲೇ ಅವರ ಕುಟುಂಬದ ಅನೇಕರು ರಾಜಕಾರಣದಲ್ಲಿ ಗಟ್ಟಿಯಾಗಿ ಕಾಲೂರುತ್ತಿದ್ದರು. ಹಿರಿಯ ಅಣ್ಣ ಕೆ.ಎಚ್. ಪುಟ್ಟಸ್ವಾಮಿಗೌಡರು 2023ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಗೌರಿಬಿದನೂರು ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆಲುವು ಸಾಧಿಸಿ ಶಾಸಕರಾದವರು. ಅವರ ಅಳಿಯ ಶರತ್ ಬಚ್ಚೇಗೌಡ ಸಹ ಹಾಲಿ ಶಾಸಕರು.. ಬೀಗರಾದ ಹಿರಿಯ ರಾಜಕಾರಣಿ ಬಿ.ಎನ್.ಬಚ್ಚೇಗೌಡರು ಸಂಸತ್ ಸದಸ್ಯರು. ಇದೀಗ ರಾಜಕೀಯಕ್ಕಿಳಿಯುವುದು ತಮ್ಮ ಸರದಿ ಎಂದು ವೆಂಕಟರಮಣೇ ಗೌಡರಿಗೆ ಅನ್ನಿಸಿದೆ. ಅದರ ಹಿಂದಿರುವುದು ಮಂಡ್ಯದ ಜನಕ್ಕಾಗಿ ಅವರು ಬಹು ದಿನಗಳಿಂದ ಕಾಣುತ್ತಿರುವ ಕನಸು.

"ಮಂಡ್ಯ ನೆಲದ ಋಣವನ್ನು ತೀರಿಸಲೆಂದೇ ರಾಜಕೀಯಕ್ಕೆ ಕಾಲಿಟ್ಟಿದ್ದೇನೆ. ಮಂಡ್ಯದ ಮಣ್ಣಿನ ಗುಣಗಳಾದ ನೇರ ನುಡಿ, ನೇರ ನಡೆ, ಸಜ್ಜನಿಕೆ, ಹೃದಯವಂತಿಕೆ, ಕಷ್ಟಗಳಿಗೆ ಸ್ಪಂದಿಸುವ ಗುಣಗಳನ್ನು ನಂಬಿಕೊಂಡು ರಾಜಕೀಯ ಕ್ಷೇತ್ರದಲ್ಲಿ ದುಡಿಯುತ್ತೇನೆ'' ಎಂದು ಅವರು ಹೇಳಿದ್ದಾರೆ. ರಾಜಕೀಯದಲ್ಲೂ ಅದ್ಭುತ ಯಶಸ್ಸು ಗಳಿಸಲು ಬೇಕಾದ ಎಲ್ಲ ಗುಣಗಳೂ ವೆಂಕಟರಮಣೇ ಗೌಡರಲ್ಲಿವೆ.